# ದಿನಾಂಕ 20-08-2022ರಂದು ಬೆಳಗ್ಗೆ 12.30 ಗಂಟೆಗೆ ವಾರ್ಡ್-88 ರ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-88 ಜೀವನ್‌ಭೀಮಾನಗರದ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ದಿನಾಂಕ: 20-08-2022ರಂದು ಬೆಳಿಗ್ಗೆ 12.30 ಗಂಟೆಗೆ ಮಾನ್ಯಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್‌ಅಧಿಕಾರಿಯವರಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನುಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ.ಮತಿ ಸಾವಿತ್ರಿ –ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-88.
2. ಶ್ರೀಮತಿ ಶಿಲ್ಪಶ್ರೀ – ಸಹಾಯಕಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ.
3. ಶ್ರೀ.ಶ್ರೀನಿವಾಸಲು – ಹಿರಿಯಆರೋಗ್ಯ ಪರಿವೀಕ್ಷಕರು
4. ಶ್ರೀ.ಹನುಮಂತಪ್ಪ – ಕಿರಿಯಘನತ್ಯಾಜ್ಯ ಪರಿವೀಕ್ಷಕರು
5. ಶ್ರೀ.ಲೋಹಿತ್ – ಎಇ, ಬಿಡಬ್ಲ್ಯೂಎಸ್‌ಎಸ್‌ಬಿ
6. ಶ್ರೀಮತಿ.ಪ್ರಭಾ – ಸ.ಅ, ಬೆಸ್ಕಾಂ
7. ಶ್ರೀ.ಮೂರ್ತಿ – ತೆರಿಗೆ ನಿರೀಕ್ಷಕರು
8. ಶ್ರೀ.ಚಂದ್ರಶೇಖರ್ – ತೆರಿಗೆ ನಿರೀಕ್ಷಕರು
9. ಶ್ರೀ.ಧನಂಜಯ – ಪಿಎಸ್‌ಐ, ಜೆಬಿಎನ್ ಸಂಚಾರಿ ಪೊಲೀಸ್‌ಠಾಣೆ
10. ಶ್ರೀ.ಸತೀಶ್ – ಎಎಸ್‌ಐ, ಜೆಬಿಎನ್ ಪೊಲೀಸ್‌ಠಾಣೆ
11. ಶ್ರೀ.ಚಂದ್ರಶೇಖರ್ – ಯುಎಫ್‌ಡಬ್ಲೂ ವತಿಕಂಟ್ರಾಕ್ಟರ್
12. ಶ್ರೀ.ಲಾಲ್ ಸಾಹೇಬ್ – ಮಾರ್ಷಲ್, ಬಿಬಿಎಂಪಿ
13. ಶ್ರೀ.ಚಂದ್ರ – ಸದಸ್ಯರು
14. ಶ್ರೀ.ಪಾಲ್ ಅಮಲ್‌ರಾಜ್ – ಸದಸ್ಯರು
15. ಶ್ರೀ.ಸದಾಶಿವನ್ – ಸದಸ್ಯರು
16. ಶ್ರೀ.ನವೀನ್ – ಸದಸ್ಯರು

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರುಆದಶ್ರೀಮತಿ ಶಿಲ್ಪಶ್ರೀ ರವರುಸಭೆಗೆ ಆಗಮಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು.ಹಿಂದಿನ ಸಭೆಯ ನಡವಳಿಗಳನ್ನು ಓದಿ ತಿಳಿಸಿದರು.ಹಾಗೂ ಇಂದಿನ ಸಭೆಯಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆಕೋರಿದರು.

- 18ನೇ ಎ.ಬಿ.ಸಿ.ಡಿ ಮತ್ತು 19ನೇ ಮುಖ್ಯರಸ್ತೆಯಲ್ಲಿ ಡೀಸಿಲ್ಟಿಂಗ್ ಕೆಲಸಗಳು ನಡೆಯುತ್ತಿದ್ದು, ಮುಂದೆ ಬರುವ ಮಳೆಯ ಮುನ್ನ ಕೆಲಸಗಳನ್ನು ಪೂರ್ಣ ಪ್ರಮಾಣದಲ್ಲಿ ಮುಗಿಸಿ ಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀ.ಸದಾಶಿವನ್‌ರವರು ತಿಳಿಸಿದರು. ಇದಕ್ಕೆ ಸಬೆಯಲ್ಲಿ ಹಾಜರಿದ್ದ ವಾರ್ಡ್‌ಅಭಿಯಂತರರುಯಾವುದೇ ವಿಳಂಭವಾಗದ ರೀತಿಯಲ್ಲಿ ಡೀಸಿಲ್ಟಿಂಗ್ ಕೆಲಸವು ಮುಗಿಯುವುದುಎಂದು ತಿಳಿಸಿದರು.

- 15ನೇ ಮುಖ್ಯರಸ್ತೆಯಲ್ಲಿ ಫುಟ್‌ಪಾತ್ ದುರಸ್ಥಿ ಮಾಡಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀಮತಿ.ತಾರಾ ಎಂಬುವವರು ತಿಳಿಸಿದರು. ಅದಕ್ಕೆ ಫುಟ್‌ಪಾತ್‌ಕಾಮಗಾರಿಯನ್ನು ಒಂದೆ ಮಾಡಿದಕಾಂಟ್ರಾಕ್ಟರ್‌ರವರಿಗೆ ತಿಳಿಸಿ ದುರಸ್ಥಿ ಮಾಡಿಸಿಕೊಡುವುದಾಗಿ ಸಭೆಯಲ್ಲಿ ಹಾಜರಿದ್ದಅಭಿಯಂತರರು ತಿಳಿಸಿದರು.
- 13ನೇ ಮುಖ್ಯರಸ್ತೆ, 14ನೇ ಮುಖ್ಯರಸ್ತೆ ಮತ್ತು ಸುತ್ತ-ಮುತ್ತಲಿನ ಅಡ್ಡರಸ್ತೆಗಳಲ್ಲಿ ಮರದ ದಿಂಬಗಳು/ಕೊಂಬೆಗಳು ಮತ್ತು ಡೆಬ್ರೀಸ್‌ಗಳು ಇರುವುದಾಗಿ ಸಭೆಯಲ್ಲಿ ಹಾಜರಿದ್ದ ಶ್ರೀಮತಿ.ಚಿತ್ರಾ ರವರು ತಿಳಿಸಿದರು. ಇವುಗಳನ್ನು ತೆರವುಗೊಳಿಸಲು ತಿಳಿಸಿದರು. ವಾರ್ಡ್‌ಅಭಿಯಂತರರುಎಲ್ಲಾರೀತಿ ಸ್ವಚ್ಛಕಾರ್ಯವನ್ನು ಕೈಗೊಳ್ಳುವುದಾಗಿ ತಿಳಿಸಿದರು.
- ಆನಂದಪುರ ಮತ್ತು ಸುದಾಮನಗರ ಸ್ಲಂಗಳಲ್ಲಿ ಕಸದ ಗಾಡಿಗಳು ಬರುತ್ತಿಲ್ಲ ಹಾಗೂರಸ್ತೆಯನ್ನು ಸ್ವಚ್ಛ ಮಾಡುತ್ತಿಲ್ಲವೆಂದು ಸಭೆಯಲ್ಲಿ ಹಾಜರಿದ್ದ ಶ್ರೀ.ಜಾನ್ ಎಂಬುವವರು ತಿಳಿಸಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದಕಿರಿಯಆರೋಗ್ಯ ಪರಿವೀಕ್ಷಕರುರವರುಇನ್ನು ಮುಂದೆತೊಂದರೆಯಾಗದರೀತಿಯಲ್ಲಿ ನೋಡುವುದಾಗಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ವತಿಯಿಂದ ಮಾಡಲಾದ ಕೆಲಸಗಳನ್ನು ಅವರೇRestoration ಮಾಡಲಾಗುವುದೆಂದು ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಭಿಯಂತರು ತಿಳಿಸಿದರು.
- 12ನೇ ಮುಖ್ಯರಸ್ತೆಯಲ್ಲಿ ಹೆಚ್ಚು ವಾಹನ ದಟ್ಟಣೆ ಹಾಗೂ ಸಾರ್ವಜನಿಕರಿಗೆಓಡಾಡಲು ಸಾಧ್ಯವಾಗುತಿಲ್ಲ ಎಂಬ ಹಿನ್ನೆಲೆಯಲ್ಲಿ ಫುಟ್‌ಪಾತ್‌ತೆರವುಕಾರ್ಯಾಚರಣೆಯನ್ನು ಹಮ್ಮಿಕೊಳ್ಳಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀ.ಚಂದ್ರುರವರು ತಿಳಿಸಿದರು. ಇದಕ್ಕೆ ಸಂಬಂಧಪಟ್ಟ ವಾರ್ಡ್‌ಅಭಿಯಂತರರು, ಹಿರಿಯಆರೋಗ್ಯ ಪರಿವೀಕ್ಷಕರು ಮತ್ತು ಸಂಚಾರಿ ಪೊಲೀಸ್ ಸಮಕ್ಷಮಒಂದುತೆರವುಕಾರ್ಯಾಚರಣೆಯನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

22/8/22

ಕಾರ್ಯದರ್ಶಿಗಳು
ವಾರ್ಡ್ ಸಮಿತಿ-88

ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ 88
ಹಾಗೂ ನೋಡಲ್ ಅಧಿಕಾರಿಗಳು,